ಸಿಸಿ ನಂ. 540/2017 ಪಿ.ಡಬ್ಲ್ಯೂ-1

<u>ದಿನಾಂಕಃ 16-08-2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲು ಶ್ರೀ ಕೆ ಎ ಆರ್ ವಕೀಲರಿಂದಃ-</u>

ನಾನು ಈಗ ಹೊಸದಾಗಿ ಹಾಕಿರುವ ದಾಖಲಾತಿಗಳು ನಾನು ಅರ್ಜಿ ಕೊಟ್ಟು ಪಡೆದುಕೊಂಡ ದಾಖಲೆಗಳು ಅಲ್ಲ ಎನ್ನುವುದು ಸರಿ. ನಾನು ವಿಜಯಕುಮಾರ್ ಹೊಯ್ಸಳ ಆರ್ಟ್ಸ್, ಸಾಯಿನಾಥ ರಸ್ತೆ, ಅರಸೀಕೆರೆ ಇವರಿಗೆ ದಾಖಲೆಗಳನ್ನು ಪಡೆದುಕೊಳ್ಳಲು ಯಾವುದೇ ಕೋರಿಕೆ ಕೊಟ್ಟಿರಲಿಲ್ಲ. ವಿಜಯಕುಮಾರ್ ಇವರಿಗೂ, ನನಗೂ ಪತ್ರಿಕಾ ವ್ಯವಹಾರ, ಹಣಕಾಸಿನ ವ್ಯವಹಾರ, ವೈಯಕ್ತಿಕ ವ್ಯವಹಾರ ಇಲ್ಲ ಎನ್ನುವುದು ಸರಿ. ವಿಜಯಕುಮಾರ್ ರವರು ಉದಯ ಟಿವಿ ಯಲ್ಲಿ ಪತ್ರಕರ್ತರು ಎಂದು ಕೆಲಸ ಮಾಡುತ್ತಿಲ್ಲ ಬೇರೆ ಯಾವುದೇ ಹುದ್ದೆಯಲ್ಲೂ ಕೂಡ ಅವರು ಕೆಲಸ ಮಾಡುತ್ತಿರಲಿಲ್ಲ. ನಿಪಿ-7 ರಿಂದ ನಿಪಿ-8 ವಿಜಯಕುಮಾರನ ಬಳಿ ಇತ್ತು ಎಂದು ಆತನೇ ನನಗೆ ತಿಳಿಸಿದ. ವಿಜಯಕುಮಾರ್ ಈ ಕೇಸಿನಲ್ಲಿ ನನ್ನ ಪರವಾಗಿ ಸಾಕ್ಷಿದಾರರು ಅಲ್ಲ. ನಾನು ವಿಜಯಕುಮಾರ್ ಬಳಿ ನನ್ನ ಕೇಸಿನ ಬಗ್ಗೆ ಮಾತುಕತೆ ಮಾಡಿದ್ದೆ. ನಾನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಹಾಸನ ಇವರ ಬಳಿಯಿಂದ ನಾನು ವರದಿಗಾರನೋ ಅಥವಾ ಛಾಯಾಗ್ರಾಹಕನೋ ಎಂದು ಯಾವುದೇ ಕ್ಲಾರಿಫಿಕೇಷನ್ ಪಡೆದುಕೊಂಡಿಲ್ಲ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದೆ. ಮಾನ್ಯತಾ ನವೀಕರಣ ಅರ್ಜಿಯನ್ನು ತೋರಿಸಿ ಸದರಿ ದಾಖಲೆಯನ್ನು ನೀವೇನಾದರೂ ವಾರ್ತಾ ಇಲಾಖೆಗೆ ಕೊಟ್ಟಿದ್ದೀರಾ ಎಂಬುವ ಪ್ರಶ್ನೆಗೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆ ಈಗಾಗಲೇ ನಿಡಿ-2 ಎಂದು ಗುರುತಿಸಲಾಗಿದೆ. ನಿಡಿ-2 ರಲ್ಲಿ ನನ್ನ ವಿಳಾಸ ಸುಭಾಷ ನಗರ, ಹಾಸನ ಎಂದು ಬರೆಯಲಾಗಿದೆ ಎನ್ನುವುದು ಸರಿ. ನಿಡಿ-2 ನ್ನು ಆಧರಿಸಿ ನಿಪಿ-8 ನ್ನು

ಕೊಡಲಾಗಿದೆ ಎನ್ನುವುದು ಸರಿ. ನಾನು ನಿಡಿ-2 ರಲ್ಲಿ ಹೇಳಿರುವ ವಿಳಾಸಕ್ಕೂ, ದೂರಿನಲ್ಲಿ ಹೇಳಿರುವ ವಿಳಾಸಕ್ಕೂ ವ್ಯತ್ಯಾಸ ಇದೆ ಎನ್ನುವುದು ಸರಿಯಲ್ಲ. ನಾನು ಹಾಜರು ಮಾಡಿರುವ ದಾಖಲೆಗಳು 2000, 2003, 2006, 2009-2013 ಹಾಗೂ 2016 ಗೆ ಸಂಬಂಧಪಟ್ಟದ್ದಾಗಿರುತ್ತದೆ. ಒಂದು ದಾಖಲೆಯಲ್ಲಿ ವರ್ಷ ಬರೆದಿಲ್ಲ. 2018 ರಲ್ಲಿ ನಾನು ಡಿ.ಸಿ.ಗೆ ಬರೆದ ಪತ್ರದಲ್ಲಿ ಉದಯ ಟಿ ವಿ ಯಲ್ಲಿ  ನಾನು ರಿಪೋರ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂಬುದರ ಬಗ್ಗೆ ಬರೆದಿದ್ದೇನೆ. ಈಗ ಸಾಕ್ಷಿಗೆ ಸದರಿ ಪತ್ರವನ್ನು ಕೊಡಲಾಗಿದೆ ಅದರ ಬಗ್ಗೆ ದಾಖಲೆಯಲ್ಲಿ ಬರೆದಿದೆಯಾ ಎಂಬುವ ಪ್ರಶ್ನೆಗೆ ಸಾಕ್ಷಿಯು ದಾಖಲೆಯನ್ನು ಓದಿದ ನಂತರ ಇಲ್ಲ ಅದರಲ್ಲಿ ಬರೆದಿಲ್ಲ ಎಂದು ಹೇಳುತ್ತಾರೆ. ಸದರಿ ಪತ್ರದಲ್ಲಿ ನಾನು ಹಾಸನದ ವಿಳಾಸ ಬರೆದಿಲ್ಲ.  ಸದರಿ ಪತ್ರ ನನಗೆ ಸಂಬಂಧಪಟ್ಟದ್ದಾಗಿರುತ್ತದೆ ಡಿ ಸಿ ಗೆ ಬರೆದ ಪತ್ರದಲ್ಲಿ ನಾನು ಎಚ್ಚರವಾಣಿ ಪತ್ರದ ಪತ್ರಕರ್ತ ಎನ್ನುವ ಬಗ್ಗೆ ಬರೆದಿದ್ದೇನೆ.   ವಿಜಯಕುಮಾರ್, ಹೊಯ್ಸಳ ಆರ್ಟ್ಸ್ ಇವರಿಗೆ ಕೊಟ್ಟ ಪತ್ರದಲ್ಲಿ ಇರುವ ಶಿವರಾಜ್ ಎಂಬುವ ವ್ಯಕ್ತಿ ನಾನಲ್ಲ ಎನ್ನುವುದು ಸರಿಯಲ್ಲ. ನಿಪಿ-8ರ ದಾಖಲೆಗಳಲ್ಲಿ ಎಲ್ಲೂ ಕೂಡ ನನ್ನ ವಾಸ ಅರಸೀಕೆರೆ ಅಥವಾ ಹಾಸನ ಎಂದು ಬರೆದಿಲ್ಲ ಎನ್ನುವುದು ಸರಿ. ಅದರಲ್ಲಿ ವಿಳಾಸ ಎಲ್ಲೂ ಬರೆದಿಲ್ಲ. ನಿಪಿ-7 ಹಾಗೂ ನಿಪಿ-8 ಕಾನೂನು ಸಮ್ಮತ ದಾಖಲೆಗಳು ಅಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಅನಿತ, ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. 16-08-2022.